ಡಿ.ಡಬ್ಲೂಃ 1

ದಿನಾಂಕಃ **11.03.2025** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು:- ವಾದಿ ಪರವಾಗಿ **Sri. PMN,** ವಕೀಲರಿಂದ

1. ತಿಪ್ಪವ್ವ ನನ್ನ ತಾಯಿ ಎಂದರೆ ಸರಿ. ದಾವಾ ಆಸ್ತಿಯು ಮೂಲವಾಗಿ ಹೊಳಲಪ್ಪ ತಳವಾರ ರವರಿಗೆ ಸಂಬಂಧಿಸಿದ ಆಸ್ತಿಯಾಗಿರುತ್ತದೆ. ಹೊಳಲಪ್ಪ ಮರಣ ಹೊಂದಿದ ನಂತರ ದೇವಕ್ಕ ಮತ್ತು ಅವರ ಮಗ ವಾರಸಾ ನಾತೆಯಂತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಾತಾ ಮರಣ ಹೊಂದಿದ ನಂತರ ನನ್ನ ತಂದೆ, ತಾಯಿ ಮತ್ತು ನಾನು ಸಾಮೂಹಿಕವಾಗಿ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿ.

2. ದೇವಕ್ಕಳು ತನ್ನ ಜೀವಿತ ಕಾಲದಲ್ಲಿ ದಾವಾ ಆಸ್ತಿಯ ವಿಚಾರವಾಗಿ ನನ್ನ ತಂದೆ ಹಾಗು ನನ್ನ ಅಜ್ಜನ ಹೆಸರಿನಲ್ಲಿ ಯಾವುದೇ ದಾಖಲೆ ಮಾಡಿಲ್ಲ ಎಂದರೆ ಸರಿ. ನನ್ನ ತಂದೆಯು 2 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಕಾಲಕ್ಕೆ ನನಗಾಗಲೀ ಹಾಗು ಉಳಿದ ಕುಟುಂಬ ಸದಸ್ಯರಿಗೆ ಮಾರಾಟದ ವಿಚಾರ ತಿಳಿಸಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೆ ಆಗಿರುವ ಖರೀದಿ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗು ಸಮಪಾಲು ಇದೆ ಎಂದರೆ ಸರಿ.

ಪಾಟೀ ಸವಾಲುಃ- ಪ್ರತಿವಾದಿ ನಂ.2(ಎ) ದಿಂದ (ಇ) ರವರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಲಕ್ಷ್ಮೇಶ್ವರ